# ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಬರ 67/2018

ಸಿಡಬ್ಲ್ಯೂ-05/ ಪಿಡಬ್ಲ್ಯೂ-02.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಲ್ಲೇಶಪ್ಪ |
| ತಂದೆಯ ಹೆಸರು | ಃ | ಚೆನ್ನಪ್ಪ ಧಾರವಾಡ |
| ವಯಸ್ಸು | ಃ | 75 ವರ್ಷ |
| ವೃತ್ತಿ | ಃ | ಒಕ್ಕಲುತನ |
| ವಾಸ್ತವ್ಯ | ಃ | ಬೊಮ್ಮಿಗಟ್ಟಿ ಕಲಘಟಗಿ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16-02-2022.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಯು ಒಂದು ದಾಖಲಾತಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಇನ್ನೊಂದು ದಾಖಲಾತಿಯಲ್ಲಿ ತನ್ನ ಸಹಿಯನುನ್ನ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ನಿಪಿ3 ರಲ್ಲಿ ನಾನೇ ಇದ್ದೇನೆ ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ, ಮುಂದುವರೆದು ನಿಪಿ5, ನಿಪಿ5(ಎ) ಮತ್ತು ನಿಪಿ6 ರ ಫೋಟೋಗಳಲ್ಲಿ ಇರುವ ವಾಹನಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ದಿಃ 14-11-2017 ರಂದು ಆಕ್ಸಿಡೆಂಟ್ ಆಗಿದ್ದು, ಪಂಚನಾಮೆಗೆ ಪೋಲಿಸರು ಕರೆದಿದ್ದರು, ಅಲ್ಲಿಗೆ ಹೋಗಿದ್ವಿ , ಅಲ್ಲಿ ಪಂಚನಾಮೆ ಮಾಡಿಕೊಂಡರು, ಅಲ್ಲಿ ಇದ್ದಿದ್ದನ್ನು ಬರೆದುಕೊಂಡಿರುತ್ತಾರೆ. ಒಂದು ಭತ್ತ ಕೊಯ್ಯುವ ಮಶಿನ್ ಯಲ್ಲಪ್ಪನ ಗಾಡಿಗೆ ಡಿಕ್ಕಿ ಹೊಡೆದು ಅವನು ಸತ್ತಿರುತ್ತಾನೆ, ಆವಾಗ ಪಂಚನಾಮೆ ಮಾಡಿರುತ್ತಾರೆ. ಅಲ್ಲಿ ಸೈನ್ ಮಾಡಿರುತ್ತೇನೆ. ರಸ್ತೆಯಲ್ಲಿ ಆಕ್ಸಿಡೆಂಟ್ ಆಗಿತ್ತು,ಗಾಡಿಗಳಿಗೆ ತೊಂದರೆ ಆಗುತ್ತೆ ಅಂತ ಸೈಡಿಗೆ ನಿಲ್ಲಿಸಿದ್ದರು ಮತ್ತು ರಸ್ತೆಯಲ್ಲಿ ಗುರುತು ಮಾಡಿದ್ದರು. ಅಲ್ಲಿ ಸರ್ವೇ ಮಾಡಿ ರಿಪೋರ್ಟ ಬರೆದರು, ಅಲ್ಲಿ ಸೈನ್ ತೆಗೆದುಕೊಂಡರು.

(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ರವರಿಂದ ಃ**

ನನಗೆ ಪಂಚನಾಮೆಗೆ ಬನ್ನಿ ಎಂದು ಪೋಲಿಸರು ಕರೆದರು ಅದೇರೀತಿ ನಾನು ಜಾಗದಲ್ಲಿ ಹಾಜರಿದ್ದೆನು ಎಂದರೆ ಸರಿ. ಅಪಘಾತ ಸ್ಥಳವನ್ನು ಲಿಂಗರಾಜು ಸಿಡಬ್ಲ್ಯೂ1 ರವರು ನಮಗೆಲ್ಲ ತೋರಿಸಿದರು ಎಂದರೆ ಸರಿ. ಭತ್ತ ಕೊಯ್ಯುವ ಮಶಿನ್ ನಂಬರ್ ಕೆಎ34 ಡಿ 8627 ಮುಂಡಗೋಡ ಕಡೆಯಿಂದ ಅದರ ಚಾಲಕನು ಕಲಘಟಗಿ ಕಡೆಗೆ ಅತಿವೇಗ ಮತ್ತು ನಿಶ್ಕಾಳಜಿತನದಿಂದ ಬಂದು ಯಲ್ಲಪ್ಪನ ಗಾಡಿ ಕೆ ಎ 35 ಇ 4475 ಗೆ ಡಿಕ್ಕಿ ಹೊಡೆದು ಅವನ ಸಾವಿಗೆ ಕಾರಣ ಆದ ಅಂತ ನಮಗೆ ತಿಳಿಸಿದರು ಎಂದರೆ ಸರಿ. ಈ ಎರಡು ಗಾಡಿಗಳನ್ನು ಪೋಲಿಸರು

ಕಾಗದ ಪತ್ರಗಳ ಪರಿಶೀಲನೆಗಾಗಿ ಅವರ ತಾಬಾಗೆ ತೆಗೆದುಕೊಂಡರು ಎಂದರೆ ಸರಿ. ಈ ಭತ್ತ ಕೊಯ್ಯುವ ವಾಹನದ ಬಲಬದಿಯ ಒಂದು ರಾಡ್ ಬೆಂಡಾಗಿತ್ತು ಎಂದರೆ ಸರಿ. ಅದು ಹಸಿರು ಬಣ್ಣದ ಗಾಡಿ ಆಗಿತ್ತು ಎಂದರೆ ಸರಿ. ಯಲ್ಲಪ್ಪನ ಗಾಡಿಗೂ ಸಹ ಸುಮಾರು ಡ್ಯಾಮೇಜ್ ಆಗಿತ್ತು ಎಂದರೆ ಸರಿ. ಪಂಚನಾಮೆಯನ್ನು ಪೋಲಿಸರು ಆದಿನ 8–15 ನಿಂದ 9–15 ವರೆವಿಗೂ ಬರೆದರು ಎಂದರೆ ಸರಿ, ನಾನು ಮತ್ತು ಫಿರ್ಯಾದಿದಾರರು ಹೇಳಿದಂತೆ ಪೋಲಿಸರು ಪಂಚನಾಮೆ ಬರೆದರು, ಓದಿ ಹೇಳಿದ ಮೇಲೆ ಅದು ಸರಿ ಇದೆ ಎಂದು ಸಹಿ ಮಾಡಿದೆನು ಎಂದರೆ ಸರಿ. ಅದೇ ರೀತಿ ಪೋಲಿಸರು ನಮ್ಮ ಎದುರಿಗೆ ಕಚ್ಚಾ ನಕಾಶೆಯನ್ನು ತಯಾರು ಮಾಡಿದರು ಅದಕ್ಕೆ ನಾವು ಸಹಿ ಮಾಡಿದೆವು ಎಂದರೆ ಸರಿ. ಘಟನಾ ಸ್ಥಳದಲ್ಲಿ ಪೋಲಿಸರು ನಮ್ಮ ಫೋಟೋ ತೆಗೆದುಕೊಂಡರು ಎಂದರೆ ಸರಿ. ಆಕ್ಸಿಡೆಂಟ್ ಮಾಡಿದ ಗಾಡಿ ಮತ್ತು ಆಕ್ಸಿಡೆಂಟ್ ಗೆ ಒಳಗಾದ ಗಾಡಿ ತೋರಿಸಿ ಫೋಟೋ ತೆಗೆದುಕೊಂಡರು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಂ ಎ ಎನ್ ಆರೋಪಿ ಪರ ವಕೀಲರಿಂದಃ**

ನನ್ನ ಊರು ಬಮ್ಮಿಗಟ್ಟಿ, ಉರನಾಗ ನಾವು ಸ್ಥಿತಿವಂತರು ಎಂದರೆ ಸರಿ, ನಮ್ಮ ಊರಿನಲ್ಲಿ ನಮ್ಮದು ಹಿರಿತನ ಇದೆ, ಊರಿನಲ್ಲಿ ಜನರು ತೊಂದರೆ ಇದ್ದರೆ ನನ್ನ ಕಡೆ ಬರುತ್ತಾರೆ ಪರಿಹಾರ ಇದ್ದರೆ ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಹಾಗಾಗಿ ನಾವು ಚಲೋ ನ್ಯಾಯ ಕೊಡುತ್ತೇವೆ ಅಂತ ಜನರು ಬಂದು ಹೋಗುವುದು ಮಾಡುತ್ತಾರೆ ಎಂದರೆ ಸರಿ. ನಮ್ಮ ಊರಿನಾಗ ಒಬ್ಬನಿಗೆ ಒಳ್ಳೆಯದು ಆಗಬೇಕೆಂದರೆ ಹೆಲ್ಪ ಮಾಡಬೇಕಾದರೆ ಮಾಡುತ್ತೇವೆ. ನನಗೆ ಪೋಲಿಸರು ಸ್ಟೇಶನಗೆ ಕರೆದರೆ ಹೋಗುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳವನ್ನು ನೋಡಿರುತ್ತೇನೆ. ನೀವು ಮೊದಲು ಘಟನಾ ಸ್ಥಳಕ್ಕೆ ಬಂದಿದ್ದಿರೋ, ಪೋಲಿಸರು ಬಂದಿದ್ದರೋ ಎಂಬ ಪ್ರಶ್ನೆಗೆ ನಾವು ಬಂದಿದ್ದೆವು, ಅವರು ಬಂದಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಘಟನಾ ಸ್ಥಳದಲ್ಲಿ ಹತ್ತಹದಿನೈದು ಜನ ಇದ್ದರು, ಅವರು ಎಲ್ಲಿಯವರು ಮತ್ತು ಎಲ್ಲಿಂದ ಬಂದಿದ್ದರು, ಅವರ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ಬೊಮ್ಮಿಗಟ್ಟಿಯಿಂದ ಅಗಡಿಗೆ ನಾನು ಆವಾಗ ಅವಾಗ ಹೊಲ ಇರುವುದರಿಂದ ಬಂದು ಹೋಗುತ್ತಿರುತ್ತೇನೆ. ಚೆಕ್ಪೋಸ್ಟನ ಮುಂದುಗಡೆ ಮನೆಗಳಿವೆ. ಮುಂದುಗಡೆ ಅಂದರೆ ಊರಾಗ ಜನ ವಸತಿ ಐತೆ. ಸ್ಥಳಕ್ಕೆ ನನಗೆ ಪೋಲಿಸರು ಕರೆದಿದ್ದರು. ಬೀಟ್ ಪೋಲಿಸರು ಕರೆದಿದ್ದರು. ಮುಂಡಗೋಡ ಅಗಡಿ ರಸ್ತೆ ಎಷ್ಟು ಅಗಲ ಇದೆ ಎಂದು ನನಗೆ ಹೇಳಲಿಕ್ಕೆ ಬರುವುದಿಲ್ಲ. ನಿಪಿ2 ನ್ನು ತೋರಿಸಿ ನಕ್ಷೆಯ ಪ್ರಕಾರವೇ ಅಪಘಾತವಾದ ರೀತಿಯಲ್ಲಿ ಗಾಡಿಗಳು ಬಿದ್ದಿದ್ದವು ಎಂದರೆ ಸರಿ. ಚಾಸಾ 4 ರವರು ಬೊಮ್ಮಿಗಟ್ಟಿ ಊರಿನವರು, ಮಾಜಿ ತಾಲೂಕು ಪಂಚಾಯ್ತಿ ಸದಸ್ಯರು ಎಂದರೆ ಸರಿ. ಅವರು ಮತ್ತು ನಾವು ಬಹಳ ಬೇಕಾದವರು ಎಂದರೆ ಸರಿಯಲ್ಲ. ತೀರಿಕೊಂಡವರು ಚಾಸಾ 4 ರವರ ಕಾನ್ಸಿಟ್ಯುನ್ಸಿಯಲ್ಲಿ ಮತ ಹಾಕುವವರೇ ಎನ್ನುವ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಆ ಕಾರಣಕ್ಕಾಗಿ ಅವರಿಗೆ ಹೆಲ್ಪ ಮಾಡಬೇಕು ಅಂತ ಅಲ್ಲಿಂದ ಇಲ್ಲಿಗೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಪಂಚನಾಮೆಯನ್ನು ಬರೆದರು, ನೀವು ಅದಕ್ಕೆ ಸಹಿ ಮಾಡಿದಿರ ಎಂಬ ಪ್ರಶ್ನೆಗೆ ಮತ್ತೆ ಅವರೇ ಬರೆಯುವುದು ನಾವೆಲ್ಲಿ ಬರೆಯೋಣ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಇದನ್ನು ಸ್ಟೇಶನ್ ನಲ್ಲೇ ಬರೆದರು ನಾವು ಅದಕ್ಕೆ ಸಹಿ ಮಾಡಿದೆವು ಎಂದರೆ ಸರಿಯಲ್ಲ. ನನಗೆ ಅಕ್ಷಾಂಶ ಮತ್ತು ರೇಖಾಂಶ ಏನೆಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದ್ದರೋ ಅಂತಾ ನಿಮಗೆ ಗೊತ್ತಿದೆಯ ಎಂಬ ಪ್ರಶ್ನೆಗೆ ಆರೋಪಿ ಸತ್ತಿರುವುದನ್ನು

ಬರೆದಿದ್ದಾರೆ ಮತ್ತೆ ಇನ್ನೇನು ಬರೆದಿದ್ದಾರೋ ನನಗೆ ಗೊತ್ತಿಲ್ಲಎಂದು ಸಾಕ್ಷಿಯು ಉತ್ತರಿಸುತ್ತಾರೆ. ಇದರಲ್ಲಿ ಏನು ಬರೆದಿದ್ದಾರೋ ಅಂತ ಗೊತ್ತಿಲ್ಲದೇ ಇದ್ದರು ಸಹ ಪಂಚನಾಮೆಯನ್ನು ಬರೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೀರಿಕೊಂಡಿರುವ ಮನುಷ್ಯ ನಮ್ಮ ಊರಿನವರೇ ಆಗಿರುವುದರಿಂದ ಅಲ್ಲಿಂದ ಬಂದು ಇಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ಪೋಸ್ಟ ಮುಂದೆ ಊರು ಇದೆ ಅಂತ ನೀವು ನೋಡಿದ ಹಾಗೆ ನಕಾಶೆಯಲ್ಲಿ ಬರೆದಿದ್ದಾರ ಎಂಬ ಪ್ರಶ್ನೆಗೆ ಅದೆಲ್ಲ ಬರೆದಿಲ್ಲ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ನಕ್ಷೆಯನ್ನು ಸಹ ಸ್ಟೇಶನ್ ನಲ್ಲಿ ತಯಾರು ಮಾಡಿರುವುದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಇದನ್ನು ಘಟನಾ ಸ್ಥಳದಲ್ಲಿ ಮಾಡಿದ್ದರೆ ಇದರ ನಿಜ ಹಕೀಕತ್ತು ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

ಪ್ರ.ದ.ನ್ಯಾದಂ. ಮುಂಡಗೋಡ.

# ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಬರ 67/2018

ಸಿಡಬ್ಲ್ಯೂ-04/ ಪಿಡಬ್ಲ್ಯೂ-01.

| | |
|---|---|
| ಸಾಕ್ಷಿದಾರರ ಹೆಸರು | ಃ ಬಸವರಾಜ ನಿಂಗಪ್ಪ ಸಾದರ |
| ತಂದೆಯ ಹೆಸರು | ಃ ನಿಂಗಪ್ಪ |
| ವಯಸ್ಸು | ಃ 54 ವರ್ಷ |
| ವೃತ್ತಿ | ಃ ರೈತಾಬಿ |
| ವಾಸ್ತವ್ಯ | ಃ ಬೊಮ್ಮಿಗಟ್ಟಿ ಕಲಘಟಗಿ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16-02-2022

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಯು ಒಂದು ದಾಖಲಾತಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಪಂಚನಾಮೆ ಆಗಿದ್ದು ಅದನ್ನು ನಿಪಿ-1 ಅಂತಾ ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ಇನ್ನೊಂದು ದಾಖಲಾತಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಕಚ್ಚಾ ನಕಾಶೆ ಆಗಿದ್ದು ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -2(ಎ) ಎಂದು ಗುರುತಿಸಲಾಯಿತು. ಅಪಘಾತ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಒಂದು ಫೋಟೋವನ್ನು ತೆಗೆದಿದ್ದು ಸದ್ರಿ ಫೋಟೋವಿನಲ್ಲಿ ಸಾಕ್ಷಿಯು ನಾನೇ ಇದ್ದೇನೆ ಎಂದು ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು. ಅದೇ ರೀತಿ ಘಟನಾ ಸ್ಥಳದಲ್ಲಿ ತೆಗೆದ ಒಂದು ಫೋಟೋವನ್ನು ನಾನೇ ಇದ್ದೇನೆ ಎಂದು ಸಾಕ್ಷಿಯು ಗುರುತಿಸಿದ ಮೇರೆಗೆ ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು. ಅಪಘಾತಪಡಿಸಿದ ಭತ್ತ ಕೊಯ್ಯುವ ಗಾಡಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಅಂತಾ, ಇನ್ನೊಂದು ಫೋಟೋವನ್ನು ನಿಪಿ-5(ಎ) ಅಂತಾ, ಅಪಘಾತಕ್ಕೆ ಒಳಗಾದ ಬೈಕನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಅಂತಾ ಗುರುತಿಸಲಾಯಿತು. ಸ್ಪಾಟ್‌ನಲ್ಲಿ ಇದ್ದಂತಹ ಯಲ್ಲಪ್ಪ ಎನ್ನುವವರ ಡೆಡ್ ಬಾಡಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಅಂತಾ ಗುರುತಿಸಲಾಯಿತು.

2. ದಿಃ 14-11-2017 ರಂದು ಮುಂಡಗೋಡ ಸಿಪಿಐ ಸಾಹೇಬರು ಪಂಚನಾಮೆಗೆ ಬನ್ನಿ ಅಂತ ಕರೆದರು, ಆ ಪ್ರಕಾರ ನಾನು ಅಗಡಿಯಿಂದ 100 ಮೀಟರ್ ಆಚೆ ಇರುವ ಕಲಘಟಗಿ ಮುಂಡಗೋಡ ರಸ್ತೆಯಲ್ಲಿ ನಾನು ಬೊಮ್ಮಗಟ್ಟಿಯಿಂದ ಬಂದಿರುತ್ತೇನೆ. ನಾನು ಪಂಚನಾಮೆಗೆ ಬಂದಾಗ ಅಲ್ಲಿ ಬಾಡಿ ಇತ್ತು. ರೋಡಿಗೆ ತೊಂದರೆ ಆಗುತ್ತೆ ಅಂತ ಗಾಡಿಗಳನ್ನು ಸೈಡಿಗೆ ಹಚ್ಚಿದ್ದರು. ಭತ್ತ ಕೊಯ್ಯುವ ಮಶಿನ್ ಜೋರಾಗಿ ಬಂದು ಯಲ್ಲಪ್ಪನ ಬೈಕಿಗೆ ಹೊಡೆದ ಪರಿಣಾಮ ಅವನು ಮೃತನಾಗಿರುತ್ತಾನೆ, ಅದರ ಸಲುವಾಗಿ ಕೇಸ್ ಮಾಡಿದ್ದು ಅದರಂತೆ ಪಂಚನಾಮೆ ಮಾಡಿರುತ್ತಾರೆ ನಾನು ಸೈನ್ ಮಾಡಿರುತ್ತೇನೆ. ಹಾತನಕಾಶೆಯನ್ನು ಪಂಚನಾಮೆ ಮಾಡಿದ ಜಾಗದಲ್ಲಿ ಮಾಡಿರುತ್ತಾರೆ. ಆಮೇಲೆ ಸೈಡಿನಲ್ಲಿ ಗಾಡಿ ನಿಲ್ಲಿಸಿ ನಮ್ಮದು ಮತ್ತು ಅದೆಲ್ಲ

ಫೋಟೋ ತೆಗೆದರು, ಭತ್ತ ಕೊಯ್ಯುವ ಮಶಿನ್ ಮತ್ತು ಬೈಕಿನ ಫೋಟೋ ತೆಗೆದರು. ಆಮೇಲೆ ಸೈನ್ ತೆಗೆದುಕೊಂಡರು.

(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ರವರಿಂದ ಃ</u>**

ನಾವು ಪಂಚನಾಮೆಗೆ ಬಂದಾಗ ಆ ಜಾಗವನ್ನು ಫಿರ್ಯಾದುದಾರರು ತೋರಿಸಿದರು ಎಂದರೆ ಸರಿ. ಇದೇ ಜಾಗದಲ್ಲಿ ಆರೋಪಿಯ ಭತ್ತ ಕೊಯ್ಯುವ ವಾಹನ ನಂಬರ್ ಕೆ ಎ 34 ಡಿ 8627 ನೇದರಿಂದ ಅತಿವೇಗ ಮತ್ತು ನಿಷ್ಕಾಳಜಿತನದಿಂದ ಬಂದು ಮೋಟಾರ ಸೈಕಲ್ ಸಂಖ್ಯೆ ಕೆ ಎ 35 ಇ 4475 ನೇದಕ್ಕೆ ಡಿಕ್ಕಿ ಹೊಡೆದು ಆತನ ಸಾವಿಗೆ ಕಾರಣ ಅಂತ ಹೇಳಿ ತೋರಿಸಿದರು ಎಂದರೆ ಸರಿ. ಅದೇ ರೀತಿ ಆ ಗಾಡಿಯನ್ನು ತೋರಿಸಿದಾಗ ಭತ್ತ ಕೊಯ್ಯುವ ವಾಹನದ ಬಲಬದಿಯಲ್ಲಿ ಒಂದು ಕಬ್ಬಿಣದ ರಾಡ್ ಬೆಂಡಾಗಿತ್ತು ಎಂದರೆ ಸರಿ. ಅದೇ ರೀತಿ ಬೈಕಿಗೂ ಸಹ ಸುಮಾರು ಡ್ಯಾಮೇಜ್ ಆಗಿತ್ತು ಎಂದರೆ ಸರಿ. ಗಾಡಿಯನ್ನು ಸೈಡಿಗೆ ಹಾಕುವಾಗ ಘಟನಾ ಸ್ಥಳದಲ್ಲಿ ತನಿಖಾಧಿಕಾರಿಗಳು ಸ್ಥಳವನ್ನು ಮೊದಲೇ ಮಾರ್ಕ ಮಾಡಿಕೊಂಡಿದ್ದರು ಎಂದರೆ ಸರಿ. ಎರಡು ಗಾಡಿಯನ್ನು ಫೋಟೋ ತೆಗೆದಾದ ಮೇಲೆ ತನಿಖಾಧಿಕಾರಿಗಳು ಈ ಎರಡು ಗಾಡಿಗಳನ್ನು ಅವರ ತಾಬ ತೆಗೆದುಕೊಂಡರು ಎಂದರೆ ಸರಿ. ಈ ಪಂಚನಾಮೆಯನ್ನು ನಾನು ಮತ್ತು ಫಿರ್ಯಾದಿದಾರರು ಹೇಳಿದಂತೆ ಬೆಳಗ್ಗೆ 8-15 ನಿಂದ 9-15 ವರೆವಿಗೂ ಪಂಚನಾಮೆ ಬರೆದು ಮುಗಿಸಿದರು ಎಂದರೆ ಸರಿ. ಅದೇ ರೀತಿ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿ. ಎಲ್ಲ ಫೋಟೋವನ್ನು ಆಗಲೇ ತೆಗೆದುಕೊಂಡರು ಎಂದರೆ ಸರಿ. ಬರೆದಾದ ಮೇಲೆ ಓದಿ ಹೇಳಿದರು, ಸರಿಯಿದೆ ಎಂದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಜಿ ಆರ್ ಎ, ಆರೋಪಿ ಪರ ವಕೀಲರಿಂದಃ</u>**

ನಮ್ಮ ಊರು ಬೊಮ್ಮಿಗಟ್ಟಿ ಈ ದಿನ ನಾನು ನ್ಯಾಯಾಲಯದಲ್ಲಿ ಫಿರ್ಯಾದಿದಾರರಿಗೆ ಮತ್ತು ಆದಿನ ತೀರಿಕೊಂಡರಲ್ಲ ಅವರಿಗೆ ಪರಿಹಾರ ಬರಲಿ ಅಂತ ಮತ್ತು ಸಹಾಯವಾಗಲೀ ಅಂತ ಸಾಕ್ಷ್ಯ ಹೇಳುತ್ತಿದ್ದೇನೆ ಎಂಬ ಪ್ರಶ್ನೆಗೆ ಆ ದಿನ ಏನಾಯಿತು ಎಂದು ನಿಜಾಂಶ ಹೇಳುತ್ತಿದ್ದೇನೆ ಅಷ್ಟೇ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಅಪಘಾತದಲ್ಲಿ ಮೃತರಾದವರು ನಮ್ಮ ಊರಿನವರೇ ಎಂದರೆ ಸರಿ. ನಮ್ಮ ಮನೆಗೂ ಮತ್ತು ಅವರ ಮನೆಗೂ ಸುಮಾರು ಅರ್ಧ ಕಿ ಮೀ ಇರುತ್ತದೆ. ಮೃತರಾದ ಮನೆಯವರ ಕಷ್ಟ ಸುಖ ನಿಮಗೆ ಗೊತ್ತಿರುತ್ತದೆಯಲ್ಲ ಎಂಬ ಪ್ರಶ್ನೆಗೆ ಪರಿಚಯ ಇದ್ದಾರೆ ಅಷ್ಟೆ ಅಂತ ಉತ್ತರಿಸುತ್ತಾರೆ. ಅಗಡಿ ಫಾರೆಸ್ಟ ಗೇಟ್ ನ ಮುಂದೆ ಜಂಪ್ ಇದೆಯಲ್ಲ ಎಂದರೆ ಸರಿಯಲ್ಲ. ಹೆಚ್ಚಾಗಿ ಫಾರೆಸ್ಟ ಇರುವ ಕಡೆ ಜಂಪ್ ಗಳು ಇರುತ್ತವೆ ಎಂಬ ಪ್ರಶ್ನೆಗೆ ಈಗೆಲ್ಲ ತೆಗೆದಿದ್ದಾರೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಮೊದಲಿದ್ದವು ಎಂದರೆ ಸರಿ. ಮುಂದುವರೆದು ಈ ಪ್ರಕರಣದಾಗ ಇದ್ದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಫಸ್ಟು ಒಂದನೇ ದಿವಸ ಒಂದು ಸೈನು ಮತ್ತು ಮಾರನೇ ದಿವಸ ಒಂದು ಸೈನ್ ಮಾಡಿರುತ್ತೇನೆ. ಮಾರನೇ ದಿವಸ ಪಂಚನಾಮೆ ಮಾಡುವ ಸಮಯಕ್ಕೆ ಸಹಿ ಮಾಡಿರುತ್ತೇನೆ. ಕಂಪ್ಲೆಂಟನ್ನು ಕೊಟ್ಟ ಫಿರ್ಯಾದಿದಾರರ ಹೆಸರು ಲಿಂಗರಾಜು ತಿರ್ಲಾಪುರ ಆಗಿರುತ್ತಾರೆ. ಘಟನಾ ಸ್ಥಳದಲ್ಲಿ ಸುಮಾರು ಜನ ಇದ್ದರು, ಮಲ್ಲೇಶ, ನಿಂಗರಾಜು, ನಮ್ಮ ಊರಿನ ಹಲವಾರು ಜನ ಮತ್ತು ಸಿಪಿಐ ಸಾಹೇಬರು ಇದ್ದರು. ಘಟನಾ ಸ್ಥಳವನ್ನು ನಮಗೆ ಪೋಲಿಸರು ತೋರಿಸಿದ್ದರು ಎಂಬ ಪ್ರಶ್ನೆಗೆ ನಾವೇ ಘಟನಾ ಸ್ಥಳವನ್ನು

ನೋಡಿರುತ್ತೇವೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಪೋಲಿಸರು ಬರೆದಂತಹ ಪಂಚನಾಮೆಯಲ್ಲಿ ಬರೆದಿರುವ ಅಷ್ಟು ವಿಷಯಗಳು ನನಗೇನು ಸರಿಯಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಆಕ್ಸಿಡೆಂಟ್ ಎಲ್ಲಾಗಿದೆ ಎಂಬ ಪ್ರಶ್ನೆಗೆ ಕಲಘಟಗಿಯಿಂದ 13 ಕಿ ಮೀ, ಮುಂಡಗೋಡದಿಂದ 12 ಕಿ ಮೀ ಇರುವ ಮುಂಡಗೋಡ ಕಲಘಟಗಿಯ ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಅಪಘಾತ ರಸ್ತೆಯ ಮಧ್ಯದಲ್ಲಿಯೇ ಆಗಿದೆ. ಅಪಘಾತ ಸ್ಥಳ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಇದೆ ಎಂಬ ಪ್ರಶ್ನೆಗೆ ಅಪಘಾತ ಸ್ಥಳ ರೋಡ್ ನ ಎಲ್ಲ ದಿಕ್ಕಿನ ಮಧ್ಯದಲ್ಲಿಯೇ ಇದೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ.

2. ಅಪಘಾತಕ್ಕೆ ಒಳಗಾದ ಗಾಡಿ ಬೈಕ್ ಆಗಿರುತ್ತದೆ. ಅಪಘಾತಕ್ಕೆ ಒಳಗಾಗಿದ್ದ ಬೈಕ್ ಕಲರ್ ನನಗೆ ಗೊತ್ತಿಲ್ಲ. ಅದರ ನಂಬರ್ ನನಗೆ ನೆನಪಿಲ್ಲ. ಅಪಘಾತ ಮಾಡಿದ್ದ ಗಾಡಿ ಭತ್ತ ಕೊಯ್ಯುವ ಮಶಿನ್ ಆಗಿರುತ್ತದೆ, ಅದರ ನಂಬರ್ ತಲೆಯಾಗೆ ಇಟ್ಟುಕೊಂಡಿಲ್ಲ. ಅಪಘಾತ ಪಡಿಸಿದ್ದ ಗಾಡಿಯ ಕಂಪನಿಯ ಹೆಸರು ಹೇಳಲಿಕ್ಕೆ ಬರುವುದಿಲ್ಲ. ಅಪಘಾತ ಸ್ಥಳದ ಪಕ್ಕ ಕಚ್ಚಾ ರಸ್ತೆ ಎಷ್ಟು ಇಂಚು ಇರುತ್ತದೆ ಎಂಬ ಪ್ರಶ್ನೆಗೆ ಅಪಘಾತ ಸ್ಥಳ ಡಾಂಬರ್ ರಸ್ತೆ ಇರುತ್ತದೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಘಟನಾ ಸ್ಥಳದ ಉದ್ದ ತುಂಬಾ ಉದ್ದ ಕಲಘಟಗಿವರೆಗೂ ಇದೆ, ಅದರ ಅಗಲ 18 ಫೂಟ್ ಇದೆ. ಅಪಘಾತವಾದ ವಾಹನವನ್ನು ಅಪಘಾತವಾದ ಸ್ಥಳದ ಯಾವ ದಿಕ್ಕಿನಲ್ಲಿ ನಿಲ್ಲಿಸಿದ್ದರು ಎಂಬ ಪ್ರಶ್ನೆಗೆ ಅಪಘಾತವಾದ ಸ್ಥಳದಲ್ಲಿ ಅಪಘಾತವಾದ ವಾಹವನ್ನು ಆಗ ಸ್ಥಳದಲ್ಲಿಯೇ ನಿಲ್ಲಿಸಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಅಪಘಾತಕ್ಕೆ ಈಡಾದ ಗಾಡಿಯನ್ನು ಆ ರೋಡಿನ ಯಾವ ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿದ್ದರು ಎಂಬ ಪ್ರಶ್ನೆಗೆ ಆ ಗಾಡಿಗಳನ್ನು ಅಲ್ಲೇ ನಿಲ್ಲಿಸಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಅಪಘಾತಪಡಿಸಿದ ವಾಹನದ ಯಾವ ಭಾಗದಲ್ಲಿ ಮೋಟಾರ್ ಕೂರಿಸಿದ್ದಾರೆ ಎಂಬ ಪ್ರಶ್ನೆಗೆ ಟ್ರ್ಯಾಕ್ಟರ್ ನ ಮೇಲ್ಭಾಗದಲ್ಲಿ ಕೂರಿಸಿದ್ದಾರೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಆ ಮೋಟಾರ್ ನ ಎಷ್ಟು ಉದ್ದ ಇದೆ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಅಪಘಾತವಾಗಿರುವ ಬೈಕಿನ ಮುಂದಿನ ಭಾಗ ಪೂರ ಗಾಡಿ ಡ್ಯಾಮೇಜ್ ಆಗಿತ್ತು. ಅಪಘಾತಕ್ಕೆ ಒಳಪಟ್ಟ ಗಾಡಿಯ ಯಾವ ಭಾಗದಲ್ಲಿ ರಾಡ್ ಬೆಂಡಾಗಿತ್ತು ಎಂಬ ಪ್ರಶ್ನೆಗೆ ಮುಂದಿನ ಭಾಗದ ಬಲಬದಿಯ ರಾಡ್ ಬೆಂಡಾಗಿತ್ತು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಭತ್ತ ಕೊಯ್ಯುವ ಮಶಿನ್ ಪೂರ ನೋಡಿದೆನು ಎಂದರೆ ಸರಿ. ಆ ಭತ್ತ ಕೊಯ್ಯುವ ಮಶಿನ್ ನ ಮುಂದಿನ ಭಾಗದಲ್ಲಿ ತೆಲುಗಿನಲ್ಲಿ ಏನೋ ಒಂದು ಬರೆದಿದ್ದಾರೆ ಅದೇನಾದರು ನಿಮಗೆ ಗೊತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ಅದರ ಕೆಳಗಡೆ ಇಂಗ್ಲೀಷನಲ್ಲಿ ಬರೆದಿದ್ದಾರೆ ಅದನ್ನೇನಾದರು ಹೇಳಲಿಕ್ಕೆ ಬರುತ್ತದೆಯ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಇಂಗ್ಲೀಷ ಬರುವುದೇ ಇಲ್ಲ ಅದಕ್ಕಾಗಿ ಹೇಳಲಿಕ್ಕೆ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಘಟನಾ ಸ್ಥಳದ ಚೆಕ್ಕುಬಂಧಿಯನ್ನು ನನಗೆ ಹೇಳಲಿಕ್ಕೆ ಬರುತ್ತದೆ. ಅಪಘಾತವಾದ ಸ್ಥಳದ ಪೂರ್ವಕ್ಕೆ ಹೊಲ ಇದೆ, ದಕ್ಷಿಣಕ್ಕೆ ರೋಡ್ ಇದೆ, ಉತ್ತರಕ್ಕೂ ರೋಡ್ ಐತಿ, ಪಶ್ಚಿಮದ ಬಾಜುಕ್ಕೆ ಹೊಲ ಐತಿ. ಭತ್ತ ಕೊಯ್ಯುವ ಮಶಿನ್ ನ ಬಲಗಡೆಯ ರಾಡ್ ಬೆಂಡಾಗಿದೆ. ಘಟನಾ ಸ್ಥಳ ಚೆಕ್ಪೋಸ್ಟ ದಾಟಿ ಈಚೆ ಇದೆ. ಮಹಜರ್ ನಲ್ಲಿ ಎರಡು ಗಾಡಿಗಳನ್ನು ತನಿಖಾಧಿಕಾರಿಗಳು ತಡೆ ಹಿಡಿದುಕೊಂಡಿದ್ದಾರೆ ಎಂದು ಬರೆದಿದ್ದಾರೆ ಅದು ಏತಕ್ಕಾಗಿ ತನಿಖಾಧಿಕಾರಿಗಳು ತಡೆಹಿಡಿದುಕೊಂಡಿದ್ದಾರೆ ಎಂದು ಹೇಳಲಿಕ್ಕೆ ಬರುತ್ತದೆಯ ಎಂಬ ಪ್ರಶ್ನೆಗೆ ಒಬ್ಬ ಮನುಷ್ಯ ಫೇಲ್ ಆಗಿರುವುದರಿಂದ ಪೋಲಿಸ್ ನವರು ತಡೆ ಹಿಡಿದುಕೊಂಡಿದ್ದಾರೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ.

3.ನಾನು ಪಂಚನಾಮೆಗೆ ಸಹಿಯನ್ನು ಕಾಗದ ಮೇಲೆ ಹಾಕಿರುತ್ತೇನೆ. ಪಂಚನಾಮೆ ಯಾದ ಸ್ಥಳದಲ್ಲಿ ಸದ್ರಿ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಆ ಪಂಚನಾಮೆಯನ್ನು ಬೆಳಗ್ಗೆ 8 ರಿಂದ 9 ಗಂಟೆ ರೆಗೂ ಮಾಡಿದ್ದಾರೆ. 8 ರಿಂದ 9 ಗಂಟೆವರೆಗೂ ಪಂಚನಾಮೆಯನ್ನು ಮಾಡಿದರಲ್ಲ ಏನೇನು ಮಾಡಿದರಲ್ಲ ಎಂಬ ಪ್ರಶ್ನೆಗೆ ಅಲ್ಲೆಲ್ಲ ಬರೆದರಲ್ಲ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಪಂಚನಾಮೆಯಲ್ಲಿ ಬರೆದುಕೊಂಡಿರುವ ವಿಚಾರ ನಿಮಗೇನು ಗೊತ್ತೆ ಇಲ್ಲ ಎಂಬ ಪ್ರಶ್ನೆಗೆ ನನಗೆ ಗೊತ್ತಿದೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ನಾನು ಪಂಚನಾಮೆಗೆ ಹೋಗಿಲ್ಲ ಎಂಬ ಪ್ರಶ್ನೆಗೆ ಹೋಗಿದ್ದೆ ಎಂದು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಮೃತ ಯಲ್ಲಪ್ಪ ಮತ್ತು ಫಿರ್ಯಾದು ದಾರರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂಬ ಪ್ರಶ್ನೆಗೆ ಇದ್ದಿದ್ದನ್ನು ಹೇಳುತ್ತಿದ್ದೇನೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಪಂಚನಾಮೆಗೆ ಬರ್ರಿ ಅಂತ ಪೋಲಿಸಿನವರು ಮತ್ತು ಊರಿನ ಹಿರಿಯರು ಕರೆದರು, ಅವರು ಕರೆಯಲು ಬಂದಾಗ ನಾನು ಊರಿನಲ್ಲೆ ಇದ್ದೆ. ನಮ್ಮದು ದೊಡ್ಡಓಣಿ ಎಂದರೆ ಸರಿ. ನನ್ನನ್ನು ಪಂಚನಾಮೆಗೆ ಬರಲು ಎಷ್ಟು ಗಂಟೆಗೆ ಕರೆದರು ಎಂಬ ಪ್ರಶ್ನೆಗೆ ಫೋನ್ ಮಾಡಿದರು ಅದಕ್ಕೆ ಬಂದೆನು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ಫೋನ್ 7-30 ಗೆ ಮಾಡಿದರು 8 ಕ್ಕೆ ಬಂದು, 9-15 ವರೆಗೂ ಇದ್ದೆನು ಎಂದು ಉತ್ತರಿಸುತ್ತಾರೆ. ನಮಗೆ ಪಂಚನಾಮೆಗೆ ಬರಲಿಕ್ಕೆ ಯಾರು ಫೋನ್ ಮಾಡಿದರು ಎಂಬ ಪ್ರಶ್ನೆಗೆ ನಮ್ಮ ಊರಿನಲ್ಲೇ ಇರುವವರು ಫೋನ್ ಮಾಡಿದರು ಅಲ್ಲಿ ಸಾಹೇಬರು ಯಾರಾದರು ಹಿರಿಯರನ್ನು ಕರೆಯಿರಿ ಎಂದು ಹೇಳಿದ್ದರಂತೆ ಅದಕ್ಕೆ ನಮ್ಮ ಊರಿನವರು ನನಗೆ ಫೋನ್ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮಗೆ ಫೋನ್ ಮಾಡಿದವರ ಹೆಸರು ಗೊತ್ತ ಎಂಬ ಪ್ರಶ್ನೆಗೆ ಅವರ ಹೆಸರು ಗಿಸರು ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಫಿರ್ಯಾದಿದಾರರು ಮತ್ತು ಮೃತರಾದ ವ್ಯಕ್ತಿ ನನಗೆ ಪರಿಚಯಸ್ಥರಾಗಿರುವುದರಿಂದ ನಾವು ನಮಗೆ ಹೇಗೆ ಬೇಕೋ ಹಾಗೆ ತಿರುಚಿ ಬರೆಸಿಕೊಂಡಿದ್ದೇವೆ ಎಂಬ ಪ್ರಶ್ನೆಗೆ ಘಟನಾ ಸ್ಥಳದಲ್ಲಿ ಏನು ಆಗಿದೆಯೋ ಅದನ್ನೇ ಬರೆದಿದ್ದಾರೆ ಎಂದು ಸಾಕ್ಷಿಯು ಉತ್ತರಿಸುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

ಪ್ರ.ದ.ನ್ಯಾದಂ. ಮುಂಡಗೋಡ.